## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

| | |
|---|---|
| ಓ ಎಸ್ ನಂ | 137/2013 |
| ಪ್ರತಿವಾದಿ ಪರ | ಡಿ.ಡಬ್ಲ್ಯೂ-3 |
| ದಿನಾಂಕ | 03-02-2026 |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ  ವಾದಿ ಪರ ಶ್ರೀ ಡಿ ಬಿ ಕೆ ವಕೀಲರಿಂದಃ

1) ನಾನು 6 ನೇ ಪ್ರತಿವಾದಿ ಪರವಾಗಿ ಈ ದಿನ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಸರ್ವೆ ನಂಬರ 384 ಕುರಿತು ದಾವೆ ಸಲ್ಲಿಸಲಾಗಿರುತ್ತದೆ. ಅದರ ಕ್ಷೇತ್ರ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರದ ಮೂಲ ಮಾಲಿಕರು ತುಕಾರಾಮ ಕರಡೆ ಇದ್ದನು. ನಾನು ಉತಾರೆ ಮತ್ತು ಖಾತೆ ಉತಾರ  ನೋಡಿರುತ್ತೇನೆ. ಡೈರಿ ನಂಬರ ಗೊತ್ತಿಲ್ಲ. ಉತಾರೆಯಲ್ಲಿ ಬರೆದಿರುವ ಡೈರಿ ನಂಬರ ನೋಡಿರುವುದಿಲ್ಲ. ಮೂಲ ಮಾಲಿಕ  ತುಕಾರಾಮ ಕರಡೆ ಎಂದು ಸುಳ್ಳು ಹೇಳುತ್ತಿದ್ದೇನೆ  ಎಂದರೆ ಸರಿಯಲ್ಲ.

2) ತುಕಾರಾಮ ಕರಡೆ  ಈತನು ಊರಲ್ಲಿ ಸನದಿ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಅದೇ ರೀತಿ ಆತನ ತಂದೆ ಗುರುಪಾದ ಸನದಿ ಈತನು ಸಹ ಸನದಿ  ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗೆ ಮೂಲ ಮಾಲಿಕ ಶ್ರೀಪತಿ ತುಕಾರಾಮ ಕರಡೆ ಎನ್ನುವವರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಗುರುಪಾದ ಈತನು 2 ಎಕರೆ ಜಮೀನಿಗೆ ಕೂಳ ನಾತೆಯಿಂದ ಕಬುಜೆಯಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ 2 ಎಕರೆ ಜಮೀನು ಕುರಿತು ಗುರುಪಾದ ಈತನು ನಮೂನೆ 7 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೂ ನ್ಯಾಯಾ ಮಂಡಳಿಯಿಂದ ಗುರುಪಾದ ಈತನಿಗೆ 2 ಎಕರೆ ಜಮೀನು ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 1 ಎಕರೆ ಜಮೀನು ಅನೀಲ

ಖೋತ ಈತನಿಗೆ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಉಳಿದ 1 ಎಕರೆ ಜಮೀನನ್ನು ಕೃಷ್ಣಾ ಪೂಜಾರಿ ಈತನಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ನಂತರ ಸರ್ವೆ ನಂಬರ 384 ರಲ್ಲಿ ಗುರುಪಾದ ಈತನ ಯಾವುದೇ ಜಮೀನು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಗುರುಪಾದ ಈಗ ತೀರಿಕೊಂಡಿರುತ್ತಾನೆ. 1 ನೇ ಪ್ರತಿವಾದಿ ಗುರುಪಾದನ ಹೆಂಡತಿ ಮತ್ತು 2 ನೇ ಪ್ರತಿವಾದಿ ಗುರುಪಾದನ ಮಗ ಎಂದರೆ ಸರಿ. 2 ನೇ ಪ್ರತಿವಾದಿ ಸನದಿ ಇದ್ದ ಕಾರಣ ಡೈರಿ ನಂಬರ 9911 ಪ್ರಕಾರ ದಾವಾ ಸ್ವತ್ತಿನಲ್ಲಿ ಪೂಕಳ್ ಹೆಸರು ಸೇರಿಸಿರುತ್ತಾನೆ ಎಂದರೆ ಸರಿಯಲ್ಲ.

3) ಸರ್ವೆ ನಂಬರ 384 ಜಮಿನಿನ ಒಟ್ಟು ಕ್ಷೇತ್ರ 15 ಎಕರೆ 13 ಗುಂಟೆ ಆಗಿತ್ತು ಅದರಲ್ಲಿ ಗುರುಪಾದ ಈತನಿಗೆ 2 ಎಕರೆ ಮಂಜೂರು ಆಗಿದ್ದರಿಂದ 13 ಎಕರೆ 13 ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ಸರಿ. ಅದೇ ಸರ್ವೆ ನಂಬರ ಜಮೀನದಲ್ಲಿ ಪುಂಡಲೀಕ ರಾಮಾ ಕರಡೆ ಇವರಿಗೆ 5 ಎಕರೆ 24 ಗುಂಟೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಜಮೀನು 7 ಎಕರೆ 24 ಗುಂಟೆಯಲ್ಲಿ ಶ್ರೀಪತಿ ಕರಡೆ ಇವರು ಇಂಧ್ರಾಬಾಯಿ ಶಿಂಗಾಡಿ ರವರಿಗೆ 6 ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದ ಸದರಿ ಜಮೀನನ್ನು ಇಂಧ್ರಾಬಾಯಿ ಕಡೆಯಿಂದ ವಾಳಕೆ ಎನ್ನುವವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಸರ್ವೆ ನಂಬರ 384 ರಲ್ಲಿ 1 ಎಕರೆ 24 ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ಸರಿ. ಅದರಲ್ಲಿ 5 ಗುಂಟೆ ಪೂಟ ಖರಾಬ ಆಗಿರುತ್ತದೆ. ವಾದಿಗೆ 1 ಎಕರೆ 29 ಗುಂಟೆ ಉಳಿದಿರುತ್ತದೆ ಎಂದರೆ ಸರಿ.

4) 1 ಎಕರೆ 29 ಗುಂಟೆ ಜಮೀನು ಮತ್ತು ಪುಂಡಲೀಕನ 16 ಗುಂಟೆ ಜಮೀನಿನಲ್ಲಿ ತನ್ನದ್ದು 2 ಎಕರೆ ಜಮೀನು ಎಂದು ಗುರುಪಾದ ಈತನು ದಾಖಲೆಗಳಲ್ಲಿ ಹೆಸರು ಸೇರಿಸಿರುತ್ತಾನೆ ಎಂದರೆ ಸರಿಯಲ್ಲ. ಆ ಕಾರಣ ಪುಂಡಲೀಕ ಈತನು 1 ಮತ್ತು 2 ನೇ ಪ್ರತಿವಾದಿ ಹಾಗೂ ಇತರರ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು 2011 ರಲ್ಲಿ ಪುಂಡಲೀಕ ಈತನಿಗೆ 5 ಎಕರೆ 24 ಗುಂಟೆ ಜಮೀನು ಇರುತ್ತದೆ ಎಂದು ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ಗುರುಪಾದ ಈತನು ಮಾಡಿಕೊಂಡಿದ್ದ 2 ಎಕರೆ ಜಮೀನಿನಲ್ಲಿ 16 ಗುಂಟೆ ಕಡಿಮೆಯಾಗಿ ವಾದಿಯರಿಗೆ 1 ಎಕರೆ 29 ಗುಂಟೆ ಉಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

5) ವಾದಿಯರು ದಾವಾ ಸ್ವತ್ತಿನ 1 ಎಕರೆ 29 ಗುಂಟೆಯಲ್ಲಿ ಮಾಲಿಕರು ಇರುವ ಬಗ್ಗೆ ಗೊತ್ತಿದ್ದರೂ ಸಹ 1 ಮತ್ತು 2 ನೇ ಪ್ರತಿವಾದಿಗಳು ಅದನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ 6 ರಿಂದ 8 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸ್ಧ್ಯಕ್ಕೆ 6 ನೇ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧಿನದಲ್ಲಿ ಇರುತ್ತಾರೆ. ಸಾಕ್ಷ್ಯ ನುಡಿಯಲು ಬರುವ ಪೂರ್ವದಲ್ಲಿ ನಾನು ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ ಅದರಲ್ಲಿ 6 ನೇ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ. 6 ನೇ ಪ್ರತಿವಾದಿ ಮಗನ ಹೆಸರು ಸಂಜಯ ಪೂಜಾರಿ (9 ನೇ ಪ್ರತಿವಾದಿ) ಪ್ರಸ್ತುತ ಚಾಲತಿಯಲ್ಲಿ ಇದ್ದಾಗ 6 ನೇ ಪ್ರತಿವಾದಿಯು 9 ನೇ ಪ್ರತಿವಾದಿಯ ಹೆಸರನಲ್ಲಿ ಬಕ್ಷಿಸ ಪತ್ರ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6) 2 ನೇ ಪ್ರತಿವಾದಿ ನನಗೆ ಯಾವತ್ತೂ ಕರೆಯಿಸಿರುವುದಿಲ್ಲ. ಆತನು ಮಾಡಿದ ವ್ಯವಹಾರಗಳು ಗೊತ್ತಿರುತ್ತದೆ. ನಾನು ಯಾವುದೇ ದಾಖಲೆಯ ಮೇಲೆ ಸಹಿ ಮಾಡಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ದಾವಾ ಸ್ವತ್ತಿಗೆ ಮಾಲಿಕರು ಇಲ್ಲದೆ ಇದ್ದರೂ ಸಹ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗಿನ ವರಿಗೂ ದಾವಾ ಸ್ವತಿನ ಮಾಲಿಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ವ್ಯವಹಾರಗಳ ಮಾಹಿತಿ ಇರುವುದಿಲ್ಲ 6 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ